ಜಾಕ್ ರೂಪಿಸಿದ್ದ ಪೀಜೋವಿದ್ಯುತ್ ಕ್ವಾರ್ಟ್ಜ್ ತಕ್ಕಡಿ (Piezoelectric Quartz Balance) ಎಂಬ ಉಪಕರಣವನ್ನು ಅಧ್ಯಯನದಲ್ಲಿ ಮೇರಿ ಹೇಗೆ ಉಪಯೋಗಿಸಬಹುದು ಎಂಬುದರ ಬಗ್ಗೆ ಮಾತನಾಡಿ ಅವರಿಗೆ ಸೂಕ್ತ ಸಲಹೆಗಳನ್ನು ನೀಡಿದರು. ಅಲ್ಲದೆ ತಾವು ಸ್ಫಟಿಕಗಳನ್ನು ಕುರಿತು ನಡೆಸುತ್ತಿದ್ದ ಅಧ್ಯಯನವನ್ನು ತಾಂತ್ರಿಕ ಪದಗಳು ಮತ್ತು ಸಂಕೀರ್ಣ ಸಮೀಕರಣಗಳನ್ನು ಉಪಯೋಗಿಸಿ ಅವರಿಗೆ ವಿವರಿಸಿದರು.

ಪಿಯೆರ್ ಅವರಿಗೆ ಎಲ್ಲಿಲ್ಲದ ಆಶ್ಚರ್ಯ. ಮೇರಿ ಹೇಳಿದ್ದೆಲ್ಲವನ್ನೂ ಅರ್ಥ ಮಾಡಿಕೊಂಡರಲ್ಲದೇ ಕೆಲವು ಚತುರ ಪ್ರಶ್ನೆಗಳನ್ನೂ ಕೇಳಿದರು. ಇದಾದ ನಂತರ ವಿಜ್ಞಾನಕ್ಕೆ ಹೊರತಾದ ಪ್ರಶ್ನೆಯೊಂದು ಮೇರಿಗೆ ಎದುರಾಯಿತು: 'ಫ್ರಾನ್ಸಿನಲ್ಲಿಯೇ ನೆಲೆಸಿಬಿಡುವ ಯೋಜನೆಯೇ ನಿನ್ನದು?'

'ಇಲ್ಲವೇ ಇಲ್ಲ. ಈ ಬೇಸಿಗೆಯಲ್ಲಿ ನಾನು ಪರೀಕ್ಷೆಯಲ್ಲಿ ತೇರ್ಗಡೆಯಾದರೆ ವಾರ್ಸಾಗೆ ಹಿಂದಿರುಗುತ್ತೇನೆ. ನಂತರ ಶರತ್ಕಾಲದಲ್ಲಿ ಇಲ್ಲಿಗೆ ಮತ್ತೆ ಬರಬೇಕೆಂದಿದ್ದೇನೆ. ಆದರೆ ನನ್ನಲ್ಲಿ ಅದನ್ನೆಲ್ಲ ಮಾಡುವಷ್ಟು ಹಣ ಇರಲಾರದು. ನಾನು ಪ್ರಾಯಶಃ ಪೋಲೆಂಡಿನಲ್ಲಿ ಉಪಾಧ್ಯಾಯಿನಿ ಆಗುತ್ತೇನೆ. ಪೋಲಿಷ್‌ರಿಗೆ ದೇಶವನ್ನು ತೊರೆಯುವ ಹಕ್ಕಿಲ್ಲ.'

ಮೇರಿಯ ತಲೆಯಲ್ಲಿ ಆ ದಿನಗಳಲ್ಲಿ ವಿಜ್ಞಾನ ಮತ್ತು ಪೋಲೆಂಡ್ ಬಿಟ್ಟು ಇನ್ನಾವ ವಿಷಯವೂ ಇರಲಿಲ್ಲ. ಇತ್ತ ಪಿಯೆರ್‌ಗೆ ಮೇರಿಯಲ್ಲಿ ಆಸಕ್ತಿ ಮೂಡಿತು. ಮೇರಿಯಿದ್ದ ಅಪಾರ್ಟ್‌ಮೆಂಟಿಗೆ ಹುಡುಕಿಕೊಂಡು ಹೋದರು. ಮನಸೆಳೆದ ಹೆಣ್ಣನ್ನು ತಲುಪಲು ನೂರು ಮೆಟ್ಟಿಲುಗಳನ್ನು ಹತ್ತಬೇಕಾಯಿತು. ಕೊಠಡಿಯಲ್ಲಿ ಅವರಿಗಿದ್ದ ಪೀಠೋಪಕರಣ ಒಂದು ಪೆಟ್ಟಿಗೆ! ಅದರ ಮೇಲೆಯೇ ಕುಳಿತು ಮಾತನಾಡಿ ಚಹಾ ಸ್ವೀಕರಿಸುತ್ತಿದ್ದರು.

ಆ ದಿನವೂ ಬಂತು. 'ನನ್ನನ್ನು ಮದುವೆಯಾಗುವೆಯಾ?' ಎಂದು ಕೇಳಿದರು ಪಿಯೆರ್. ಮೇರಿ ಉತ್ತರ ನೀಡಲಿಲ್ಲ. ಪರೀಕ್ಷೆಗಳು ಮುಗಿದಿದ್ದವು. ಹೀಗಾಗಿ ಪೋಲೆಂಡಿಗೆ ಹೋಗಿಬಿಟ್ಟರು. ಪಿಯೆರ್ ಬಿಡಲಿಲ್ಲ. ತನ್ನ ತಾಯ್ನಾಡಿನಲ್ಲಿ ಮೇರಿಯಿದ್ದ ಪ್ರತಿಯೊಂದು ಊರಿಗೂ ಒಂದೊಂದು ಪ್ರೇಮಪತ್ರವನ್ನು ಬರೆದರು. ಅವರಿಂದ ಒಪ್ಪಿಗೆಯೂ ಬರಲಿಲ್ಲ, ತಿರಸ್ಕಾರವೂ ಬರಲಿಲ್ಲ.



ಪತಿ ಪಿಯೆರ್‌ನೊಂದಿಗೆ ಸಂಶೋಧನಾನಿರತ ಮೇರಿ ಕ್ಯೂರಿ

ಕೊನೆಗೆ ಮೇರಿಗೆ ವಿದ್ಯಾರ್ಥಿವೇತನ ದೊರೆತು ಪ್ಯಾರಿಸ್ಸಿಗೆ ಹಿಂದಿರುಗಿದರು. ಅವರ ಬೆನ್ನ ಹಿಂದೆ ಬಿದ್ದರು ಪಿಯೆರ್. ಒತ್ತಡ ಹೇರಿದರು. ತನ್ನ ತಾಯಿಯಿಂದ ಹೇಳಿಸಿದರು: 'ನಿನಗೆ ನನ್ನ ಮಗನಿಗಿಂತ ಒಳ್ಳೆಯ ಗಂಡ ಸಿಗುವುದಿಲ್ಲ. ಸುಮ್ಮನೆ ಅವನನ್ನು ಮದುವೆಯಾಗು'. ನಂತರ ಮೇರಿಯ ಅಕ್ಕ, ಬಾವ ಅವರುಗಳಿಂದಲೂ ಹೇಳಿಸಿದರು. ಕೊನೆಗೆ, ಹತ್ತು ತಿಂಗಳ ನಂತರ ಮೇರಿ ಒಪ್ಪಿಗೆ ನೀಡಿದರು. ವಿಜ್ಞಾನಕ್ಕೆ ತನ್ನನ್ನು ಮೀಸಲಾಗಿಟ್ಟುಕೊಂಡಿದ್ದ ಸನ್ಯಾಸಿನಿ ಗೃಹಸ್ಥಾಶ್ರಮ ಪ್ರವೇಶಿಸಿದರು. ತೀರಾ ಸರಳ ವಿವಾಹ ಮಹೋತ್ಸವ. ಮದುಮಕ್ಕಳಿಬ್ಬರೂ ತಂತಮ್ಮ ಪ್ರಯೋಗಾಲಯದ ಉಡುಪಿನಲ್ಲಿಯೇ ಇದ್ದರು. ಮದುವೆ ನಂತರ ತಂತಮ್ಮ ಬೈಸಿಕಲ್ ಏರಿ ಮಧುಚಂದ್ರಕ್ಕೆ ಹೊರಟರು.



ಲ ಪ್ಯಾಂಥಿಯಾನ್ ಸೌಧ

ಪ್ಯಾರಿಸ್ಸಿನಲ್ಲಿ ಕಾಲೇಜಿನ ಹತ್ತಿರವೇ ಒಂದು ಅಪಾರ್ಟ್‌ಮೆಂಟಿನಲ್ಲಿ ಸಂಸಾರ ಹೂಡಿದರು. ತನ್ನ ಅತ್ತೆಯಿಂದ ಮೇರಿ ಅಡುಗೆ ಕೆಲಸವನ್ನೂ ಕಲಿತರು. ಮನೆಗೆ ಬೇಕಾದ ಸಾಮಾನು, ತರಕಾರಿ ಇತ್ಯಾದಿಗಳನ್ನು ತಾವೇ ಅಂಗಡಿಯಿಂದ ತರುತ್ತಿದ್ದರು. ಪಿಯೆರ್‌ಗೆ ವಿಜ್ಞಾನ ಬಿಟ್ಟು ಮತ್ತೇನೂ ಕೆಲಸವಿಲ್ಲ. ಸಂಜೆ ಊಟ ಮುಗಿಸಿ ಇಬ್ಬರೂ ಮನೆಯಲ್ಲಿದ್ದ ಮೇಜಿನ ಹಿಂದೆ ಎದುರುಬದುರಾಗಿ ಕುಳಿತು ಅಧ್ಯಯನ ನಡೆಸುತ್ತಿದ್ದರು. ಪಿಯೆರ್ ಕಾಲೇಜಿನಲ್ಲಿ ಉಪನ್ಯಾಸಗಳಿಗೆ ಸಿದ್ಧವಾಗುತ್ತಿದ್ದರು. ಮೇರಿ, ಮುಂದೆ ಏನು ಸಂಶೋಧನೆ ಮಾಡಬೇಕು ಎನ್ನುವುದರ ಬಗ್ಗೆ ಗಮನಹರಿಸುತ್ತಿದ್ದರು. ಇಂತಹ ಸಹ ಅಧ್ಯಯನದಿಂದಲೇ ಮೇರಿಗೆ ತಮ್ಮ ಮುಂದಿನ ದಾರಿ ತಿಳಿದದ್ದು— ಬೆಕೆರಲ್ ಕಂಡುಹಿಡಿದಿದ್ದ ಬೆಕೆರಲ್ ಕಿರಣಗಳ ಮೇಲೆ ಇನ್ನೂ ಹೆಚ್ಚು ಅಧ್ಯಯನ ನಡೆಸುವುದು.

ಹೀಗೆ ಪ್ರಾರಂಭವಾಯಿತು ಒಂದು ಚಾರಿತ್ರಿಕ ದಾಂಪತ್ಯ ಜೀವನ. ಹೆಂಡತಿ ಪ್ರಾರಂಭಿಸಿದ ಪ್ರಯೋಗಕ್ಕೆ ಪಿಯೆರ್ ಉಪಕರಣಗಳನ್ನು ನೀಡಿ, ಅವುಗಳ ಬಳಕೆಯಲ್ಲಿ ತರಬೇತಿಯನ್ನೂ ನೀಡಿದರು. ಇವರು ಕಣ್ಣಲ್ಲಿ ಕಣ್ಣಿಟ್ಟು ಪ್ರಯೋಗಗಳನ್ನು ಮಾಡಿದರು. ಇದರ ಫಲವೇ ರೇಡಿಯೊ ಆ್ಯಕ್ಟಿವಿಟಿಯ ಅನ್ವೇಷಣೆ. ಇದು ಫಿಸಿಕ್ಸ್‌ನಲ್ಲಿ ಒಂದು ಹೊಸ ಪ್ರಭೇದವನ್ನೇ ತೆರೆಯಿತು. ಇದಲ್ಲದೆ